ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಸುಬ್ರಮಣ್ಯನಗರ ವಾರ್ಡ್62ರಲ್ಲಿ
ದಿನಾಂಕ: 24-01-2023 ರಂದು, ನಡೆದ ವಾರ್ಡ್ ಸಮಿತಿ ಸಭೆಯ

***ಸಭಾ ನಡವಳಿಗಳು.***

ವಾರ್ಡ್ ಸಂಖ್ಯೆ-62 ಸುಬ್ರಮಣ್ಯನಗರ ಸಮಯ ಬೆಳಿಗ್ಗೆ 11:00 ಘಂಟೆಗೆ

ದಿನಾಂಕ: 24-01-2023 ರಂದು ವಾರ್ಡ್ ಸಂಖ್ಯೆ: 62ರ ಜನವರಿ ಮಾಹೆಯ ವಾರ್ಡ್ ಸಮಿತಿ ಸಭೆಯು ವಾರ್ಡ್ ಸದಸ್ಯರ ಕಛೇರಿ ಗರಡಿಮನೆ ಹಿಂಭಾಗದಲ್ಲಿ, ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ:62ರ ಸಹಾಯಕ ಅಭಿಯಂತರರು ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದು ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಕೊಂಡು ಸಭೆ ನಡೆಸಲು ತಿಳಿಸಲಾಯಿತು.

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಸುಬ್ರಮಣ್ಯನಗರ ಇ ಬ್ಲಾಕ್ ನಲ್ಲಿ ಸನಿಟರಿ ಹಾಗೂ ವಾಟರ್ ಸಪ್ಲೈ ಕೆಲಸ ದಿಂದ ಮಣ್ಣಿನ ರಾಶಿ ರಸ್ತೆಯಲ್ಲಿ ಇದ್ದು ಸದರಿ ಮಣ್ಣಿನ ರಾಶಿ ತೆರವು ಮಾಡಲುಸ್ಥಳೀಯ ನಾಗರೀಕರು ಸಭೆಗೆ ಮನವಿ ಮಾಡಿದರು, ಇದಕ್ಕೆ ಕಾರ್ಯದರ್ಶಿಗಳು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.
- ಸುಬ್ರಮಣ್ಯನಗರ ವಾರ್ಡ್ ನಲ್ಲಿ ವಾಟರ್ ಸಪ್ಲೈ ಸಮಸ್ಯೆ ಬಗ್ಗೆ ಸಂಬಂದಪಟ್ಟ ಇಲಾಖೆಗೆ ಪತ್ರ ಬರೆಯಲು ಸ್ಥಳೀಯ ನಾಗರೀಕರು ಸಭೆಗೆ ಮನವಿ ಮಾಡಿದರು, ಇದಕ್ಕೆ ಕಾರ್ಯದರ್ಶಿಗಳು ಪತ್ರ ಬರೆಯುವುದಾಗಿ ಸಭೆಗೆ ತಿಳಿಸಿದರು.
- ಸುಬ್ರಮಣ್ಯನಗರ ವಾರ್ಡ್ ನಲ್ಲಿ BWSSB ಇಲಾಖೆಯಿಂದ ಕೈಗೊಂಡಿರುವ ಕಾಮಗಾರಿಯಿಂದ ರಸ್ತೆಗಳು ಗುಂಡಿ ಬಿದ್ದಿದ್ದು ಸದರಿ ರಸ್ತೆಗಳನ್ನು ಸರಿ ಪಡಿಸಲು ನಾಗರೀಕರು ಸಭೆಗೆ ಮನವಿ ಮಾಡಿದರು, ಇದಕ್ಕೆ ಕಾರ್ಯದರ್ಶಿಗಳು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು

**ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.**

Nagesh S R

ಕಾರ್ಯದರ್ಶಿಯುವರು
ಸಹಾಯಕಅಭಿಯಂತರರು, ವಾರ್ಡ್-62
ಸುಬ್ರಮಣ್ಯನಗರ, ಮಲ್ಲೇಶ್ವರಂ ಉಪವಿಭಾಗ, ಬಿಬಿಎಂಪಿ

ನೋಡಲ್ಅಧಿಕಾರಿ
ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,
ಮಲ್ಲೇಶ್ವರಂ ಉಪವಿಭಾಗ, ಬಿಬಿಎಂಪಿ,ಬೆಂಗಳೂರು